(ಇಂದು ದಿನಾಂಕಃ **07/07/2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಪಾಟೀ ಸವಾಲು ಮೇಲ್ಮನವಿದಾರರ ಪರ ಶ್ರೀ ಎಸ್.ಎಸ್.ಜೆ. ವಕೀಲರಿಂದಃ–</u>**

12. ನಾನು 2008 ರಲ್ಲಿ ಎದುರುದಾರರ ಶಾಲೆಯಲ್ಲಿ ಕೆಲಸಕ್ಕೆ ಸೇರಿದೆ. 2009 ರಲ್ಲಿ ನಮ್ಮ ಸಂಸ್ಥೆಗೆ ಅನುದಾನ ದೊರೆಯಿತು. ನಾನು ಪ್ರಭಾರ ಮುಖ್ಯೋಪಾಧ್ಯಾಯನಾಗಿದ್ದೆ. ನನಗಿಂತ ಮುಂಚೆ ಮೇಲ್ಮನವಿದಾರ ಮುಖ್ಯೋಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದರು ಎನ್ನುವುದು ನಿಜ.

13(1). ನನ್ನ ಮತ್ತು ಎಂ.ಎಂ.ಚಂದ್ರಗೇರಿ ಎನ್ನುವವರ ಸೇವಾ ಹಾಜರಾತಿಯಲ್ಲಿ ಮೇಲ್ಮನವಿದಾರ ಅಕ್ರಮ ತಿದ್ದುಪಡಿ ಮಾಡಿರುವ ಕುರಿತು ಸಂಸ್ಥೆಗೆ ತಿಳಿಸಿದ್ದೇವೆ ಮತ್ತು ಬೇರೇನೂ ಕ್ರಮ ಕೈಗೊಂಡಿಲ್ಲ. ಆಪಾದಿಸಲಾದ ಕೃತ್ಯದಿಂದ ಸಂಸ್ಥೆಯ ಪ್ರತಿಷ್ಠೆಗೆ ಯಾವ ರೀತಿ ಕಳಂಕ ಬಂತು ಎನ್ನುವುದು ಗೊತ್ತಿಲ್ಲ.

13(2). ಮೇಲ್ಮನವಿದಾರ ಸಹಶಿಕ್ಷಕನಾಗಿ ಕೆಲಸ ಮಾಡುವಾಗ ಅನಧಿಕೃತ ಗೈರು ಹಾಜರು ಉಳಿದು ಹಾಗೆಯೇ ಮುಂದುವರೆಸಿರುವ ಕುರಿತು ದಾಖಲೆಗಳನ್ನು ಸಂಸ್ಥೆಗೆ ನೀಡಿದ್ದೇನೆ. ಈ ಪ್ರಕರಣದಲ್ಲಿ ನಾನು ಅಂತಹ ಯಾವುದೇ ದಾಖಲೆ ಹಾಜರುಮಾಡಿಲ್ಲ.

13(3). ಮೇಲ್ಮನವಿದಾರ ಇತರ ಶಿಕ್ಷಕರನ್ನು ಸಂಸ್ಥೆಯ ವಿರುದ್ಧ ಎತ್ತಿಕಟ್ಟಿ ಗುಂಪುಗಾರಿಕೆ ಮಾಡಿರುವ ಕುರಿತು ನಾನು ಯಾವುದೇ ದಾಖಲೆ ಹಾಜರುಮಾಡಿಲ್ಲ.

13(4). ಮೇಲ್ಮನವಿದಾರ ಸಂಸ್ಥೆಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿರುವ ಕುರಿತು ನಾನು ಯಾವುದೇ ದಾಖಲೆ ಹಾಜರುಮಾಡಿಲ್ಲ.

13(5). ಮೇಲ್ಮನವಿದಾರ ಮೇಲಾಧಿಕಾರಿಗಳ ಆದೇಶವನ್ನು ಸಂಸ್ಥೆಯ ಗಮನಕ್ಕೆ ತರುತ್ತಿರಲಿಲ್ಲ ಎಂದು ಸಂಸ್ಥೆಯವರು ನನಗೆ ತಿಳಿಸಿದ್ದರು. ನಾನು ಪ್ರಭಾರ ಮುಖ್ಯೋಪಾಧ್ಯಾಯ ನಾಗಿ ಕೆಲಸ ಮಾಡುವಾಗ ಮೇಲ್ಮನವಿದಾರ ಸ್ವಲ್ಪ ದಿನಗಳ ಕಾಲ ಸಹಶಿಕ್ಷಕ ನಾಗಿ ಕೆಲಸ ಮಾಡಿದ. ಸೇವೆಯಲ್ಲಿ ಮೇಲ್ಮನವಿದಾರರು ನನಗಿಂತ ಹಿರಿಯವರು. ಮೇಲ್ಮನವಿದಾರ ಮೇಲಾಧಿಕಾರಿಗಳ ಆದೇಶವನ್ನು ಸಂಸ್ಥೆಯ ಗಮನಕ್ಕೆ ತರುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

13(6). ಮೇಲ್ಮನವಿದಾರ ಸಂಸ್ಥೆಯ ಕುರಿತು ಪತ್ರ ಬರೆದು ಸಂಸ್ಥೆಯ ಬಗ್ಗೆ ಕೀಳರಿಮೆ ಬರುವಂತಹ ವಿಷಯ ತಿಳಿಸಿದ ಕುರಿತು ದಾಖಲೆ ನಾನು ಯಾವುದೇ ದಾಖಲೆ ಹಾಜರುಮಾಡಿಲ್ಲ. ಸಂಸ್ಥೆಯವರು ಹಾಜರುಮಾಡಿದ್ದಾರೆ.

13(7). ಮೇಲ್ಮನವಿದಾರ ಶಿಕ್ಷಕನಾಗಿ ಹಾಗೂ ಮುಖ್ಯೋಪಾಧ್ಯಾಯನಾಗಿ ಸರಿಯಾಗಿ ಕೆಲಸ ನಿರ್ವಹಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

13(8). ಮೇಲ್ಮನವಿದಾರ ಮೇಲಾಧಿಕಾರಿ ಮತ್ತು ಆಡಳಿತ ಮಂಡಳಿಗೆ ಪತ್ರ ಬರೆದು ಅಸಭ್ಯ ವರ್ತನೆ ತೋರಿ ಅವಮಾನ ಮಾಡಿ ನೀತಿಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

13(9). ಮೇಲ್ಮನವಿದಾರ ಸ್ವಂತ ಲಾಭಕ್ಕಾಗಿ ಬೇರೆ ವ್ಯವಹಾರ ಮಾಡಿದ್ದನ್ನು ನಾನು ನೋಡಿಲ್ಲ.

14. ನಮ್ಮ ಶಾಲೆಗೆ ಅನುದಾನ ದೊರೆತ ನಂತರ ಮೇಲ್ಮನವಿದಾರ ಮತ್ತು ಆಡಳಿತ ಮಂಡಳಿ ಮಧ್ಯೆ ವಿವಾದ ಉಂಟಾಯಿತು ಎನ್ನುವುದು ನಿಜ. ಮುಖ್ಯೋಪಾಧ್ಯಾಯ ಹುದ್ದೆಯ ಪ್ರಭಾರವನ್ನು ಆಡಳಿತ ಮಂಡಳಿಯಿಂದ ಪಡೆದೆ. ಸಂಸ್ಥೆಗೆ ಅನುದಾನ ದೊರೆತ ನಂತರ ಆಡಳಿತ ಮಂಡಳಿಯವರು ಮೇಲ್ಮನವಿದಾರರಿಗೆ ರೂ.10 ಲಕ್ಷ ದೇಣಿಗೆ ಕೇಳಿದ್ದು, ಮೇಲ್ಮನವಿದಾರ ದೇಣಿಗೆ ಕೊಡಲು ಆಗದೇ ಇದ್ದುದರಿಂದ ಹಾಗೂ 5 ನೇ ಎದುರುದಾರರಾದ ನಮ್ಮ ಶಾಲೆಯ ಈಗಿನ ಕನ್ನಡ ಶಿಕ್ಷಕರನ್ನು ನೇಮಿಸಿಕೊಳ್ಳಲು ಸುಳ್ಳು ಆಪಾದನೆ ಮಾಡಲಾಗಿದೆ ಎನ್ನುವುದು ಸುಳ್ಳು. ಆಡಳಿತ ಮಂಡಳಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆ:** ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.